

# ಹಾಲಿನಂತೆ ಹರಿಯುವ ಉರುಂಬಿ ಹೊಳೆ

■ ಚಿತ್ರ-ಲೇಖನ: **ಸುಹಾನಿ ಬಡೆಕ್ಕಿಲ**

ಸಪ್ತ ಸಮುದ್ರಗಳು, ಸಪ್ತ ಕುಲಾಚಲಗಳು, ವಿಶ್ವದ ವಿರಾಟ ರೂಪಗಳು.. ಹೀಗೆ ನಮ್ಮ ಕರ್ನಾಟಕದಲ್ಲಿ ಅನೇಕ ಪ್ರವಾಸಿ ತಾಣಗಳಿವೆ. ಅದರಲ್ಲೂ ದಕ್ಷಿಣ ಕನ್ನಡ ಸೌಂದರ್ಯದ ಬೀಡು. ನಮಗೆ ತಿಳಿಯದಿರುವ ಅನೇಕ ಪ್ರವಾಸಿತಾಣಗಳು ನಮ್ಮ ದಕ್ಷಿಣ ಕನ್ನಡದಲ್ಲಿದೆ. ಇದರಲ್ಲೊಂದು ಸುಂದರ ತಾಣವೇ ಉರುಂಬಿ ಹೊಳೆ. ಪ್ರಕೃತಿಯ ಸಿರಿಯನ್ನು ಮತ್ತಷ್ಟು ಶ್ರೀಮಂತಗೊಳಿಸಿರುವ ರಮ್ಯತಾಣ.

ಮಳೆಗಾಲದಲ್ಲಿ ಹಾಲಿನಂತೆ ಧುಮ್ಮಿಕ್ಕುವ ಉರುಂಬಿಯ ಮನಮೋಹಕ ದೃಶ್ಯವನ್ನು ನೋಡುವುದೇ ಒಂದು ಸೊಬಗು. ಸುರಿಯುವ ಮಳೆಯ ನಡುವೆ ಕೊಡೆ ಹಿಡಿದು ಉರುಂಬಿಯ ರುದ್ರ ನರ್ತನ ನೋಡುವಾಗ ಸಿಗುವ ಅಮಿತಾನಂದ ವರ್ಣಿಸಲಸಾಧ್ಯ. ಉರುಂಬಿ ಹೊಳೆಯ ನೀರು ಕುಮಾರಧಾರ ನದಿಗೆ ಸೇರುತ್ತದೆ.

ಉರುಂಬಿಗೆ ಹೋಗುವುದು ಹೇಗೆ?

ಇದು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಪೆರಾಬೆ ಗ್ರಾಮದ ಕುಂತೂರು ಪದವು ಎಂಬ ಊರಿನಲ್ಲಿದೆ. ಉಪ್ಪಿನಂಗಡಿಯಿಂದ ಕಡಬ ಸುಬ್ರಹ್ಮಣ್ಯ ಬಸ್ಸಿನಲ್ಲಿ ಹೋಗಿ ಪದವು ಎಂಬಲ್ಲಿ ಇಳಿದರೆ ಅಲ್ಲಿಂದ 4 ರಿಂದ 5 ಕಿ.ಮೀ. ದೂರದಲ್ಲಿದೆ. ಪದವಿನಿಂದ ಉರುಂಬಿಗೆ ಬಾಡಿಗೆಗೆ ವಾಹನ ಪಡೆದು ಹೋಗಬಹುದು. ಉರುಂಬಿ ಹೊಳೆಗೆ ಹೋಗಲು ಡಿಸೆಂಬರ್‌ನಿಂದ – ಮೇ ವರೆಗೆ ಪ್ರಶಸ್ತವಾದ ಸಮಯ. ಆಗ ನೀರು ಇಳಿಮುಖ ಇದ್ದು ಈಜಾಡಲು ಅನುಕೂಲವಾಗಿದೆ.

ಉರುಂಬಿ ಹೊಳೆಯ ಆ ಕಲ್ಲಿನ ಬಂಡೆ, ತಂಪು ತಂಗಾಳಿ, ಸುತ್ತಮುತ್ತಲ ಗಿಡಮರಗಳು ಯಾರನ್ನು ಬೇಕಾದರೂ ಕಣ್ಮನ ಸೆಳೆಯುವುದರಲ್ಲಿ ಸಂಶಯವಿಲ್ಲ. ದೇಹಕ್ಕೆ ಉತ್ತಮ ವಿಶ್ರಾಂತಿ ನೆಲೆಯಾಗುವುದಂತೂ ಖಂಡಿತ.



ಅಲ್ಲಿನ ಕಲ್ಲಿನ ಬಂಡೆಗಳ ಮೇಲೆ ಸೀರೆಯ ಗುರುತನ್ನು ಕಾಣಬಹುದು .ಅದು ದ್ರೌಪದಿಯ ಸೀರೆದೆಂದು ಅಲ್ಲಿಯ ಜನರ ವಾಡಿಕೆ. ಹಾಗೂ ಅಲ್ಲೇ ಪಾದದ ಗುರುತನ್ನೂ ಕಾಣಬಹುದು. ಅಲ್ಲೇ ಸ್ವಲ್ಪ ದೂರದಲ್ಲಿ ಪಾಂಡವರ ಕೆರೆ ಎಂಬ ಕ್ಷೇತ್ರವಿದೆ. ಅದು ತುಂಬಾ ಪವಿತ್ರವಾದುದು, ಅದಕ್ಕೂ ಉರುಂಬಿಗೂ ಏನೋ ಸಂಬಂಧವಿದೆ ಎಂದು ಹೇಳುತ್ತಾರೆ.

## ಪಾಂಡವರ ಕೆರೆ

ಪಾಂಡವರು ವನವಾಸಕ್ಕೆ ಹೋಗಿದ್ದಾಗ ಬಾಯಾರಿದಾಗ ಅಲ್ಲಿಯ ಕೆರೆಯ ನೀರನು ಕುಡಿದರೆಂಬ ಪ್ರತೀತಿ. ಇದನ್ನೇ ಯಕ್ಷ ಸರೋವರವೆಂದು ಕರೆಯುತ್ತಾರೆ. ಕೈಯಲ್ಲೊಂದು ಕ್ಯಾಮೆರಾ ತೆಗೆದುಕೊಂಡು ಹೋದರೆ ಈ ಸುಂದರ ಜಲವನ್ನು ಸೆರೆ ಹಿಡಿಯಬಹುದು. ಒಮ್ಮೆಯಾದರೂ ಇಲ್ಲಿಗೆ ಭೇಟಿ ಕೊಡಬೇಕು. ■